RegdNo B G 155 Sn 1-7-1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅರಮನೆಸಂಸ್ಥೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು – ಧರ್ಮಪ್ರಚಾರನಿರತ ಎಂ.ಎಸ್ ಕೃಷ್ಣಂರವ್ 2

(1232)

ನಿಶೇಧ

ಹಣ ಚಲಾವಣೆ ಸ್ಫೀತಿಯಿಂದ ಅನೇಕ ತ. ವೋಗೊಳ್ಳುತ್ತಿರುವದರಿಂದ ಅದನ್ನು ಪ್ರತಿಬಂಧಿಸಲು ಆಂಧ್ರ ಸರ್ಕಾರ ಶಾಸನ ಮಾಡಲಿದೆ.

★

ರಾಜೀನಾಮೆ ಸಂಭವ

ರಾಜಕೀಯದಿಂದ ನಿವೃತ್ತರಾಗುವ ಮಾಜಿ ಮುಖ್ಯ ಮಂತ್ರಿ ಶ್ರೀ ಭಕ್ತವ ಗಲಾಂ ಮಹಮದರು ಕಾಶ್ಮೀರ ಶಾಸನ ಸಭೆಗೆ ರಾಜೀನಾಮೆ ಕೊಡುವ ಸಂಭವ ವಿದೆ.

★

ಸಕ್ಕರೆ ಸಂಸ್ಥೆಗಳು

ಈ ವರ್ಷ ಹತ್ತು ಸಕ್ಕರೆ ಸಂಸ್ಥೆಗಳು ಸ್ಥಾಪನೆ ಆಗುವದೆಂದು ನವ ದೆಹಲಿಯಲ್ಲಿ ಆಹಾರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ತಿಳಿಸಿದರು

★

ಕೇಂದ್ರದ ಸಲಹೆ

ಅಂಕಿಗಳನ್ನು ಹಿಂದಿಯಲ್ಲಿ ಬರೆಯುದಿಂ ವಂತೆ ಹಿಂದಿಮಾತನಾಡುವ ರಾಜ್ಯಗಳಿಗೆ ಭಾರತ ಸರ್ಕಾರ ಸಲಹೆ ಮಾಡಿದೆ.

★

ಭೂವಶ

ಕೈಗಾರಿಕೆಗಳಿಗಾಗಿ ಮೈಸೂರು ಸರಕಾರ ಭೂಮಿ ವಶಮಾಡಿಕೊಳ್ಳುವದೆಂದು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ಸುದ್ದಿ ದರು

●

ತೈಪ್ತಿ

ಭಾರತ ಕಾನೂನು ಏಜಾರದಲ್ಲಿ ಮಬಾನ ಮುಖ್ಯ ಮಂತ್ರಿ ಶ್ರೀ ಎಂ. ಭಕ್ತವತ್ಸಲಂ ತೃಪ್ತಿವಟ್ಟಿದ್ದಾರೆ.

ಬಡ್ಡಿ ಇಲ್ಲ

ಬ್ಯಾಂಕ್ ಆಫ್ ಬೇಣಾ ಈ ದಿನದಿಂದ ವಿದೇಶಿಯರಿಗೆ ಹಣಕ್ಕೆ ಬಡ್ಡಿ ಕೊಡುವದಿಲ್ಲವೆಂದು ತಿಳಿಸಿರುವದಾಗಿ ಪೀಕಿಂಗಿನಿಂದ ವಾರ್ತೆ ಬಂದಿಹೆ.

❋

ಹಣ ಕೊಡಬೇಕಿಲ್ಲ

ಬರ್ಮಾದಲ್ಲಿರುವ ಸರ್ವ ಸಿವಿಲು ಆಸ್ಪತ್ರೆಗಳನ್ನು ಸೋಷಲಿಸಂ ತತ್ವದ ಪ್ರಕಾರ ಜನರಲ್ ವಾರ್ಡಿಗೆ ಪ್ಲೇಸೇರಿಸಿದೆ. ಆಸ್ಪತ್ರೆಗೆ ಸೇರಲು ಯಾರೂ ಹಣ ಕೊಡಬೇಕಾಗಿಲ್ಲ.

❋

ಆತಂಕವಿಲ್ಲ

ಆಹಾರ ಪರಿಸ್ಥಿತಿ ತೃಪ್ತಿಕರವಾಗಿರುವದೆಂದು, ಅಕ್ಕಿ ಹೆಚ್ಚು ದೊರೆಯುವದೆಂದು ಆಹಾರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರು ನವ ದೆಹಲಿಯಲ್ಲಿ ತಿಳಿಸಿದರು.

★

ಚರ್ಚೆ

ಈ ತಿಂಗಳು ಬೆಂಗಳೂರಿನಲ್ಲಿ ನಡೆಯುವ ಎ ಐ ಸಿ ಸಿ ಅಧಿವೇಶನ ಕಾಂಗ್ರೆಸು ಚಟುವಟಿಕೆ ಕುರಿತು ಚರ್ಚಿಸುವದು.

★

ಸ್ವತಂತ್ರಕ್ಕೆ ವಿಜಯ

ಕಿಯೊಂಜಾರ್ ಕ್ಷೇತ್ರದಿಂದ ಆದ ಘನತೆಯ ಸ್ಥಾನದ ಉಪಚುನಾವಣೆಯಲ್ಲಿ ವಿಧಾನ ಸಭೆಗೆ ಸ್ವತಂತ್ರ ಪಕ್ಷ ಕಾಂಗ್ರೆಸು ಪಕ್ಷವನ್ನು ಸೋಲಿಸಿತು

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಪಕ್ಷ, ಜ್ಯೋತಿರ್ವಿದ್ಯನ್ಮಣಿ
ಸಂಪಕ್ಕ ಕೃಷ್ಣಜೋಯಿಸರಿಂದ

2 ಶುಕ್ರವಾರ ಚಾತಿ ಆಶ್ಲೇಷ

ಕಚ್ ಭಾಗದಿಂದ ಭಾರತ ಸೈನ್ಯ ವಾಪಸ್ಸಿಲ್ಲ

★

ಪ್ರದರ್ಶನವಿಲ್ಲ

ಪಶ್ಚಿಮ ಬೋರ್ನಿಯೋ ಸಿನಿಮಾ ಮಾಲೀಕರು, ಸಿನಿಮಾ ಕಾರ್ಮಿಕರ ಸಮ್ಮಿನಿಸ್ಟ್ ಯೂನಿಯನ್ ಕೇಳಿಕೆ ಮಂತೆ ಭಾರತ ಚಿತ್ರಗಳ ಪ್ರದರ್ಶನವನ್ನು ನಿಲ್ಲಿಸಿರುವರೆಂದು ಜಕಾರ್ತಾ ವಾರ್ತೆ.

ಆರೋಪ

ಭಾರತವು ಪಾಕಿಸ್ತಾನದಲ್ಲಿ ಸೇನೆ ಜಮಾವಣೆ ಹೆಚ್ಚಿಸಿದೆ ಎಂದು ಪಾಕಿಸ್ತಾನ ಭದ್ರತಾ ಮಂಡಲಿಗೆ ತಿಳಿಸಿತು.

ಹತೋಟಿ

ಬ್ರಿಟನ್ನಿನ ಶೇಕಡ ಎಂಬತ್ತು ಕಂಪೆನಿಗಳು ಶೇಕಡ 70 ರಿಂದ 80 ರಷ್ಟು ವಿಶ್ವದ ಷೇರುಗಳ ಹತೋಟಿಹೊಂದಿದೆ ಎಂದು ಲಂಡನ್ ವಾರ್ತೆ ತಿಳಿಸುತ್ತದೆ.

ಒತ್ತಾಯ

ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಮೈಸೂರು ಸರ್ಕಾರ ನಾಲ್ಕನೆ ಯೋಜನೆಗೆ ಹೆಚ್ಚು ಹಣ ಸಹಾಯಕ್ಕಾಗಿ ಭಾರತದ ಸರ್ಕಾರವನ್ನು ಒತ್ತಾಯಮಾಡಲಾಗುವುದು.

ಪ್ರತಿಮೆ ಸ್ಥಾಪನೆ

ಬೆಜಾವುಂದ ಸೈನಿಕ ಶಾಲೆಯಲ್ಲಿ ರಾಣಿ ಚನ್ನಮ್ಮನ ಪ್ರತಿಮೆ ಇಡಲಾಗುವುದು.

ಹೋಟೆಲು ಬಂಡ್

ಕಮಲಾಪುರ ಮತ್ತು ಗುಬ್ಬಿಯಲ್ಲಿ ಕಾಲಂದ ಎಚ್ಚೆರಿಕೆಗಾಗಿ ಎಲ್ಲಾ ಹೋಟಲುಗಳೂ, ಮಿಠಾಯಿ ಅಂಗಡಿಗಳು, ಸಿನಿಮಾಗಳು, ಸಂತೆ, 2 ವಾರಗಳು ಮುಚಲ್ಪಟ್ಟಿವೆ

ನವದೆಹಲಿ— ಕಚ್ ಬಗ್ಗೆ ಆಗಿರುವ ಒಪ್ಪಂದದಲ್ಲಿ ಭಾರತ ಸೈನ್ಯ ವಾಪಸ್ಸಾಗಬೇಕೆಂಬ ನಿಬಂಧನೆಯೇನೂ ಇಲ್ಲವೆಂದು ಸರ್ಕಾರಿ ವಕ್ತಾರರು ಹೇಳಿದರು — ಒಪ್ಪಂದದಂತೆ ಭಾರತ ಭೂಮಿಯ ಸುರ್ಯಾ-ಕಂಜರಾಂಕೋಟೆ-ಡಿಂಗ'ನಲ್ಲಿ 30 ಪೈಲಿಗಳಲ್ಲಿ ಪಾಕಿಸ್ತಾನವು ಉಸ್ತುವಾರಿಗೆ ಸುತ್ತಾಡಲು ಹಕ್ಕು ಪಡೆದಿದೆ:

❋

ರಾಜು ಮಾಡಿದವರು ಹತ್ತಿರ ಬಂಧುಗಳು

ಕಚ್ ಕದನಸ್ತಂಭ ಒಪ್ಪಂದಕ್ಕೆ ರಾಜು ಮಾಡಿರುವ ಭಾರತ ವಿದೇಶಾಂಗ ಕಾರ್ಯದರ್ಶಿ ಅಜೀಂ ಹುಸೇನರೂ ಮತ್ತು ಭಾರತದಲ್ಲಿ ಪಾಕಿಸ್ತಾನ ಹೈ ಕಮಿಷನರಾಗಿರುವ ಅರ್ಷದ್ ಹುಸೇನರೂ, ತಮ್ಮತಮ್ಮ ರಾಷ್ಟ್ರ ಸರಕಾರಗಳ ರಾಜುಮಾಡಿದ ಇವರು ಹತ್ತಿರ ಬಂಧುಗಳು : ಇವರ ತಂದೆಗಳು ಸಹೋದರರಾಗಿದ್ದರು : ಜೊತೆಗೆ ಅಜೀಂ ಹುಸೇನರ ಸಹೋದರಿಯನ್ನು ಅರ್ಷದ್ ಹುಸೇನ್ ವಿವಾಹವಾಗಿರುವರು

ಜನಸಂಘ ನಾಯಕರ ಬಂಧನ

ಕಚ್ ಕದನ ವಿರಾಮ ಒಪ್ಪಂದಕ್ಕೆ ರಾಜುಮಾಡುವುದನ್ನು ವಿರೋಧಿಸಿ ಕೇಂದ್ರ ಸೆಕ್ರೆಟೇರಿಯಟ್ ಹೊರಗೆ ಪ್ರದರ್ಶನ ನಡೆಸಿದ ಜನಸಂಘದ ಎಂ ಪಿ ಗಳಾದ ಅಕಲ್ ಬಿಹಾರ್ ವಾಜಪೈ ಮತ್ತು ಇತರ ಹದ್ದು ಬಡೆ ಸೇರಿ 59 ಮಂದಿ ಬಂಧಿಸಲಟ್ಟರು

❋

ಕಾಡುಕರ ಪ್ರಸಂಗ

ಗುಲ್ಬರ್ಗಾ— ಇಲ್ಲಿ ಒಂದು ಪಡಖಾನೆಯಲ್ಲಿ ಇಬ್ಬರು ಕಾಡಕಂಲ್ಲಿ ಹೊಡೆದಾಟವಾಗಿ ತೀವ್ರ ಗಾಯಗೊಂಡ ಕಾಡಕ ಪೋಲೀಸು ಬ್ಯಾದೆಯು ಆಸ್ಪತ್ರೆ ಸೇರಿಸಲ್ಪಟ್ಟು ಅಲ್ಲಿ ಸತ್ತನು

2-7-65
No Jokes

ತುಳು ಗಾದೆಗಳು

ಎಲುಬಿಲ್ಲದ ನಾಲಿಗೆಯನ್ನು ಹೇಗೆ ಬೇಕಾದಂತೂ ತಿರುಗಿಸಬಹು.

ಅನ್ನಕೊಂದು ಪದಾರ್ಥ ಬೇಕೇಬೇಕು.

ಹುಟ್ಟುವಾಗ ಬೆಕ್ಕಲೆ, ಸಾಯುವಾಗ ಕಕ್ಕಲೆ.

ಕೋಳಿಯು ಕಾಲಗೆಜ್ಜೆ ಕಟ್ಟಿದಂತೆ ತಿಪ್ಪೆ ಕರೆಯುವುದು ಬಿಟ್ಟೀತೆ ?

ಎಳೆತನದಲ್ಲಿ ಕಲಿಯದ್ದು ಎಪ್ಪತ್ತರ ಮೇಲೆ ಬಂದೀತೆ ?

ರಟ್ಟೆ ಮುರಿಯಬೇಕು, ರೊಟ್ಟಿ ತಿನ್ನಬೇಕು.

ಸಾಯಿಗೆ ಮನುಷ್ಯನ ಗುಂಟು ಜೆಕ್ಕಿಗೆ ಮನೆಯ ಗುರುತು.

ಹುಟ್ಟುವಾಗ ಮನುಷ್ಯನು ಶ್ರೀಮಂತಿಕೆ ತಂದಿಲ್ಲ, ಸಾಯುವಾಗ ಅದನ್ನು ಜೊತೆಯಲ್ಲಿ ಒಯ್ಯುವುದಿಲ್ಲ

ಬಂದಾಗಲೂ ಒಬ್ಬ ಹೋಗುವಾಗಲೂ ಒಬ್ಬ

ಒಡಿಸದ ಸವಿಯೂಟ ಬಿಟ್ಟು ಭಿಕ್ಷಾನ್ನಕ್ಕೆ ಕೈಯೊಡ್ಡಿದ ಹಾಗೆ.

ಹುಟ್ಟಿದಾಲ್ಲಿ ಎಂಡೆತ್ತುಗಳಿದ್ದರೆ ಹಾಯ್ದುಕೊಳ್ಳಬೇ ಇಂಬಿಲ್ಲವು.



ನವದೆಹಲಿಯಲ್ಲಿ ನಡೆದ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಟ್ಟ ವಿ.ಟೊಲಾದೆಲ್ ಬಯಾಲಜಿಗಳು.

ವುಡ್‌ಲಾಂಡ್ ವೈಭವ 6 ನೇ ವಾರ

ಪ್ರೇಕ್ಷಕರಿಂದ ಪ್ರಶಂಸೆ ಪಡೆಯುತ್ತಾ ಯಶಸ್ವಿಯಾಗಿ ನಡೆಯುತ್ತಿದೆ

ಸುಂದರ ದೃಶ್ಯಕಳು, ಸಮಯೋಚಿತ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಚಿತ್ರ

ಜಾನ್‌ವರ್ (ಹಿಂದಿ) Janwar

ತಾರಾಬಳಗ— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವಿರಾಜ್, ರಾಜೇಂದ್ರನಾಥ್

ಅಪೆರ— 25-6-65 ರಿಂದ

.... ಮಾಡರ್ನ್ ಥಿಯೇಟರಿಂದ 100 ನೇ ಅಮೋಘ ತಮಿಳು ಚಿತ್ರ....

ಪಲವನಕ್ಕು ವಲವ

ನಟವರ್ಗ— ಶಿವಾಜಿ ಗಣೇಶನ್, ಸಾವಿತ್ರಿ, ಅಶೋಕನ್, ತಂಗವೇಲು

ಮನೋರಮ, ಮುತ್ತುಲಕ್ಷ್ಮಿ

ಶಕ್ತಿ

ಸುಧಾ

ಉತ್ತಮ ಟಾನಿಕ್

SHAKTI SUDHA

A Superb Tonin

Ed ted, printed and published by Dharma prachara nirata M s Kv'shna Rao, at the Satyavadi Press Chamarajapuram, Mysore 4